**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 16.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್ ಎಂ ಬಿ ವಕೀಲರಿಂದಃ**

2. ಗೋನಾಳ ಗ್ರಾಮದ ಸರ್ವೆ ನಂ.176 ಆಸ್ತಿಯನ್ನು ನಾನು ನನ್ನ ಸ್ವಂತ ಹಣದಿಂದ ಖರೀದಿಸಿರುತ್ತೇನೆಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿಲ್ಲ. ನಾನು ಆ ಸಮಯದಲ್ಲಿ ಶೇತ್ಕಿ ಕೆಲಸ ಮಾಡುತ್ತಿದ್ದೇನು. ದಾವಾ ಶೆಡ್ಯೂಲ್-ಅ ಅನುಕ್ರಮ ನಂ.1 ಆಸ್ತಿ ಸರ್ವೆ ನಂ.750/1 ರ 1 ಎಕರೆ 28 ಗುಂಟೆ ಜಮೀನು ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿ ಅದು ನಮ್ಮ ಅಜ್ಜನಿಗೆ ಭಕ್ಷಿಶ್ ಬಂದಿತ್ತು ಅದನ್ನು ಅವರು ಟ್ರಸ್ಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಟ್ರಸ್ಟ ಹನಮಂತದೇವರ ದೇವಸ್ಥಾನದ ಟ್ರಸ್ಟ ಆಗಿರುತ್ತದೆ. ಸದರಿ ಟ್ರಸ್ಟ ಇದೆ ಎಂದು ತೊರೀಸಲು ನ್ಯಾಯಾಲಯಕ್ಕೆ ದಾಖಲೆ ನೀಡಿರುತ್ತೇನೆ. ಅಂತಹ ಟ್ರಸ್ಟನ ಯಾವುದೇ ದಾಖಲೆಗಳನ್ನು ನಾನು ಹಾಜರಪಡಿಸಿಲ್ಲ ಆದರೂ ಸಹ ಹಾಜರಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜನ ಹೆಸರು ಹನುಮಂತಪ್ಪ. ಈ ಮೇಲೆ ಹೇಳಿದ ಆಸ್ತಿ ನನ್ನ ಅಜ್ಜನಿಂದ ನನ್ನ ತಂದೆಗೆ ಬಂದಿತು ಎಂದರೆ ಸರಿ. ನಿಪಿ.4 ರಲ್ಲಿ ನಮ್ಮ ತಂದೆ ತೀರಿಕೊಂಡ ನಂತರ ಅವರ ವಾರಸಾದಾರರ ಹೆಸರುಗಳು ದಾಖಲಾಗಿರುತ್ತವೆಂದು ನಮೂದಿಸಿದೆ ಎಂದರೆ ಸರಿ. ನಿಪಿ.4 ರಲ್ಲಿ ಮೃತ ವಾದಿ ಹಾಗೂ ನನ್ನ ಸಹೋದರಿ ಮೃತ ನಾಗರತ್ನ ಇವರ ಹೆಸರುಗಳು ಸಹ ಇವೆ ಎಂದರೆ ಸರಿ. ನಿಪಿ.4 ರ ಪ್ರಕಾರ ವಾರಸುದಾರರ ಹೆಸರುಗಳು ದಾಖಲಾದ ನಂತರ ನೀವೇನಾದರೂ ವಾಟ್ನಿ ಮಾಡಿಕೊಂಡಿದ್ದಿರಾ ಎಂದರೆ ಸಾಕ್ಷಿ ಹೌದು ಆಪಸಾತ್ ವಾಟ್ನಿ ಮಾಡಿಕೊಂಡಿರುತ್ತೇವೆ ಹಾಗೂ ಅವರ ಕಬೂಲಿ ಸಹಿ

ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕಬೂಲಿ ಸಹಿ ದಾಖಲೆಯನ್ನು ಹಾಜರಪಡಿಸಿರುತ್ತಿರಾ ಎಂದರೆ ಸಾಕ್ಷಿ ಡ ಉತಾರ ಹಾಜರಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕಬೂಲಿ ಪತ್ರ ಹೊರತುಪಡಿಸಿ ನಾವು ಯಾವುದೇ ಪಾಲುವಿಭಾಗ ಪತ್ರ ಮಾಡಿಕೊಂಡಿಲ್ಲ. ಸರ್ವೆ ನಂ.750/1 ರಲ್ಲಿ ನನ್ನ ಸಹೋದರಿಯರಿಗೆ ಯಾವುದೇ ಹಿಸ್ಸೆ ನೀಡಿಲ್ಲ. ಸಾಕ್ಷಿ ಸದರಿ ಆಸ್ತಿಯಲ್ಲಿ ಟ್ರಸ್ಟ ಇದೆ ಅದನ್ನು ಗಂಡು ಮಕ್ಕಳು ಮಾತ್ರ ಮಾಡಬೇಕು ಹಾಗಾಗಿ ಅವರಿಗೆ ಹಿಸ್ಸೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಿಪಿ.4 ದಾಖಲೆಯಲ್ಲಿ ಟ್ರಸ್ಟ ಆಸ್ತಿ ಗಂಡು ಮಕ್ಕಳಿಗೆ ಮಾತ್ರ ಬರಬೇಕು ಎಂದು ಬರೆಸಿಲ್ಲ ಎಂದರೆ ಸರಿ. ನಮ್ಮೆಲ್ಲ ಸಹೋದರ ಸಹೋದರಿಯರ ಮಧ್ಯ 1992 ರಲ್ಲಿ ಕಾನೂನು ಪ್ರಕಾರ ವಾಟ್ನಿಯಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ವಾಟ್ನಿ ಪತ್ರ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ನಿಪಿ.5 ದಾಖಲೆ ಸದರಿ ದಾಖಲೆಯಾಗಿರುತ್ತದೆ. ನಿಪಿ.5 ದಾಖಲೆ ನೊಂದಣೆಗೊಂಡಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ನನ್ನ ಸಹೋದರಿಯವರಿಗೆ ಎಷ್ಟು ಹಿಸ್ಸೆ ನೀಡಿದೆ ಅಥವಾ ಅವರ ಹೆಸರುಗಳು ನಮೂದಿಸಿಲ್ಲ ಎಂದರೆ ಸರಿ. ನಿಪಿ.5 ರಲ್ಲಿ ತೋರಿಸಿರುವ ಎಲ್ಲಾ ಆಸ್ತಿಗಳಲ್ಲಿ ವಾದಿ ಈ ದಾವೆಯಲ್ಲಿ ಪಾಲು ವಿಭಾಗ ಕೇಳಿರುತ್ತಾರೆ ಎಂದರೆ ಸರಿ. ನಿಪಿ.5 ದಾಖಲೆಯ ಬಗ್ಗೆ ಮೃತ ಯಲ್ಲವ್ವ ಹಾಗೂ ಮೃತ ನಾಗಮ್ಮ ಇವರಿಗೆ ಗೊತ್ತಿಲ್ಲ ಎಂರದೆ ಸಾಕ್ಷಿ ಸ್ವಂತಃ ನಾಗಮ್ಮನ ಗಂಡ ಬಂದು ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ. ನಿಪಿ.5 ದಾಖಲೆಯಾಗುವಾಗ ನನ್ನ ಸಹೋದರಿಯರಾದ ನಾಗಮ್ಮ ಮತ್ತು ಯಲ್ಲವ್ವ ಜೀವಂತವಿದ್ದರು. ಆದರೆ ಅವರು ಬಂದಿರಲಿಲ್ಲ ನಾಗಮ್ಮನ ಗಂಡು ಬಂದು ಕಬೂಲಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.5 ರಲ್ಲಿ ತೋರಿಸಿದ ಆಸ್ತಿ ಯಲ್ಲವ್ವ ಹಾಗೂ ನಾಗಮ್ಮ ಇವರಿಗೆ ಸಂಬಂಧಿಸಿದ ಆಸ್ತಿ ಹಾಗೂ ಅವರ ಪರವಾಗಿ ಅವರಿಬ್ಬರ ಯಜಮಾನರು ಹೋಗಿಲ್ಲ ಹಾಗೂ

ಸದರಿ ದಾಖಲೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

3. ಯಲ್ಲವ್ವ ಈಕೆಯ ಗಂಡನ ಮನೆಯ ಅಡ್ಡಹೆಸರು ಕರ್ಜಗಿ. ನಿಪಿ.5 ದಾಖಲೆಯಲ್ಲಿ ಯಲ್ಲವ್ವ ಅಥವಾ ನಾಗಮ್ಮ ಇವರ ಗಂಡನ ಸಹಿ ಇರುವುದಿಲ್ಲ ಎಂದರೆ ಸರಿ. ದಿಃ15/02/1992 ರಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಳ್ಳುವವರೆಗೂ ಸರ್ವೆ ನಂ.750/1 ಆಸ್ತಿ ನನ್ನ ತಂದೆಯ ಹೆಸರಿನಲ್ಲಿಯೇ ಇತ್ತು ನಂತರ ವಾರಸುದಾರರ ಹೆಸರುಗಳು ದಾಖಲಾಗಿವೆ. ಈ ಆಸ್ತಿಯಲ್ಲಿ ಮೃತ ವಾದಿಗೆ 1/5 ಹಿಸ್ಸೆ ಇದೆ ಎಂದರೆ ಸರಿಯಲ್ಲ. ನಿಪಿ.12 ಪಹಣಿಯಲ್ಲಿ ಯಾವುದೇ ಟ್ರಸ್ಟನ ಹೆಸರು ನಮೂದಿಸಿಲ್ಲ ಎಂದರೆ ಸರಿ.

4. ಸರ್ವೆ ನಂ.197 ಕ ಉಣಕಲ್ ಗ್ರಾಮದ ಆಸ್ತಿಯಲ್ಲಿ ನನ್ನ ತಂದೆ ಐದು ಜನ ಮಕ್ಕಳಿಗೂ 1988 ರಲ್ಲಿ ಭಾಗ ಮಾಡಿಕೊಟ್ಟಿರುತ್ತಾರೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿ ಹೌದು ಯಲ್ಲವ್ವ ಹಾಗೂ ನನ್ನ ಇನ್ನೊಬ್ಬ ಸಹೋದರಿಯವರಿಗೆ ಅದರಲ್ಲಿ ವಾಟ್ನಿ ಕೊಟ್ಟಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಎನ್.ಎ., ಆಗಿದೆ ಎಂದರೆ ಸರಿ. ಅದರ ಕ್ಷೇತ್ರ 4 ಗುಂಟೆ 13 ಆಣೆ ಇದೆ. ಅದು ನಮಗೆ ಸಂಬಂಧ ಇಲ್ಲ ಅದು ದೇವಸ್ಥಾನಕ್ಕೆ ಕೊಟ್ಟ ಆಸ್ತಿ ಎಂದು ನುಡಿಯುತ್ತಾರೆ. ಈ ಆಸ್ತಿಯಲ್ಲಿ ದೇವಸ್ಥಾನ ಇದ್ದ ಕಾರಣ ವಾದಿ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಒಂದು ಫೊಟೋ ತೋರಿಸಲಾಗಿ ಸದರಿ ಫೋಟೋ ಮಾರುತಿ ದೇವಸ್ಥಾನದ ಫೊಟೋ ಹಾಗೂ ಅದರಲ್ಲಿ ನಿಜಗುನೆಪ್ಪ ಎಂಬುವವರು ಪೂಜೆ ಮಾಡುತ್ತಾರೆಂದು ಸಾಕ್ಷಿ ಒಪ್ಪಿದ್ದು ಸದರಿ ಫೊಟೋವನ್ನು ನಿಪಿ.28 ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸದರಿ ಫೊಟೋವನ್ನು ನಿಶಾನೆಯನ್ನಾಗಿ ಗುರುತಿಸಲು ಆಕ್ಷೇಪಣೆ ಸಲ್ಲಿಸಿದ್ದು ಸಾಕ್ಷಿ ಸದರಿ ಫೊಟೋವನ್ನು ಒಪ್ಪಿಕೊಂಡ ಕಾರಣ ಅವರ ಆಕ್ಷೇಪಣೆಯನ್ನು ತಳ್ಳಿಹಾಕಲಾಯಿತು. ಸಾಕ್ಷಿಗೆ ಸರ್ವೆ ನಂ.192 ಕ ಪ್ಲಾಟ್ ನಂ.53 ರ ಪಹಣಿಯನ್ನು ತೋರಿಸಲಾಗಿ ಸದರಿ ಪಹಣಿಯನ್ನು ಸಾಕ್ಷಿ ಒಪ್ಪಿದ್ದು ನಿಪಿ.29 ಎಂದು ಗುರುತಿಸಲಾಯಿತು.

ಸರ್ವೇ ನಂ.750/1 ರಲ್ಲಿ ಯಾವುದೇ ದೇವಸ್ಥಾನ ಇಲ್ಲ ಎಂದರೆ ಸಾಕ್ಷಿ ಸರಿ, ಆದರೆ ಸ್ವಲ್ಪ ದೂರದಲ್ಲಿದೆ ಎಂದು ನುಡಿಯುತ್ತಾರೆ.

5. ನನ್ನ ಪ್ರತಿವಾದಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಷಯಗಳನ್ನು ಸುಳ್ಳು ಸೃಷ್ಟಿಸಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಯಲ್ಲವ್ವ ಹಾಗೂ ನಾಗವ್ವರವರಿಗೆ ಕೇಳದೇ ಆಸ್ತಿಗಳನ್ನು ಪ್ರತಿವಾದಿ ನಂ.11 ರಿಂದ 14 ರವರಿಗೆ ಮಾರಾಟ ಮಾಡಿರುತ್ತೇವೆಂದರೆ ಎಂದರೆ ಸಾಕ್ಷಿ ನಮ್ಮ ಸ್ವಂತ ಗಳಿಸಿದ ಆಸ್ತಿಗಳನ್ನು ನಾವು ಮಾರಾಟ ಮಾಡಿರುತ್ತೇವೆ ಹಾಗೂ ಸದರಿ ಖರೀದಿದಾರರು ಅದನ್ನು ನೋಡಿಯೇ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. 2008 ರಲ್ಲಿಯೇ ನಾವು ಆಸ್ತಿ ಮಾರಾಟ ಮಾಡಿರುತ್ತೇವೆ. ನಾವು ಮಾರಾಟ ಮಾಡಿದ ಆಸ್ತಿ ಸಹ ಪಿತ್ರಾರ್ಜಿತ ಆಸ್ತಿಯಿಂದ ಬಂದ ಉತ್ಪನ್ನದಿಂದ ಖರೀದಿಸಿದ ಆಸ್ತಿಗಳಾದ ಕಾರಣ ಅದರಲ್ಲಿ ಸಹ ನನ್ನ ಸಹೋದರಿಯರಿಗೆ 1/5 ಹಿಸ್ಸೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನ್ನ ಸಹೋದರಿಯವರಿಗೆ 1/5 ಹಿಸ್ಸೆ ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**